<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ</u>

<u>ಸಿ.ಸಿ. ಸಂಖ್ಯೆಃ **2151/2024**</u>

<u>ಪಿರ್ಯಾದಿ</u> : ರಾಜ್ಯ, ಪರವಾಗಿ ಮೂಡಿಗೆರೆ ಪೊಲೀಸ್ ಠಾಣೆ,
ಮೂಡಿಗೆರೆ.

ವಿರುದ್ಧ

<u>ಆರೋಪಿ</u> : ಬಿ.ಪಿ.ವಿಜಯಕುಮಾರ ಯಾನೆ ತಮಿಳ್ ಕುಮಾರ,
ವಯಸ್ಸು ಸುಮಾರು 51 ವರ್ಷ,
ಬಿನ್ ದಿಃ ಪೆರುಮಾಳ್, ವಾಸಃ ಇಂದಿರಾ ನಗರ,
ಬಿಳಗುಳ ಗ್ರಾಮ, ಮೂಡಿಗೆರೆ ತಾಲ್ಲೂಕು.

<u>ದೋಷಾರೋಪಣೆ</u>

ಶ್ರೀ. ವಿಶ್ವನಾಥ್ ಎ., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ, ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆಗಳು ಏನೆಂದರೆಃ-

ದಿನಾಂಕಃ 04.10.2024 ರಂದು ರಾತ್ರಿ ಸುಮಾರು 9.45 ರ ಸಮಯದಲ್ಲಿ ಮೂಡಿಗೆರೆ ಪೊಲೀಸ್ ಠಾಣಾ ವ್ಯಾಪ್ತಿಯ ಬಿಳಗುಳದ ಇಂದಿರಾನಗರದಲ್ಲಿರುವ ಚಾಸಾ2-ಮೋಹನ್ ರವರನ್ನು ಬಿಡಲು ಚಾಸಾ1-ರಾಜು ರವರು ಹೋಗಿದ್ದು, ಇಂದಿರಾನಗರದಲ್ಲಿರುವ ಚಾಸಾ3-ನೋಹಾ ರವರ ಅಂಗಡಿಯ ಮುಂದೆ ಚಾಸಾ1 ರವರು ಬೈಕ್ ಅನ್ನು ನಿಲ್ಲಿಸಿ, ಅವರ ಅಂಗಡಿಯಲ್ಲಿ ವಿಮಲ್ ಪ್ಯಾಕೇಟ್ ಗಳನ್ನು ತೆಗೆದುಕೊಳ್ಳುತ್ತಿರುವಾಗ, ಅದೇ ಬಡಾವಣೆಯ ವಾಸಿಯಾದ ಆರೋಪಿಯಾದ ನೀವು ಅಂಗಡಿ ಮಾಲೀಕರಾದ ಚಾಸಾ3 ರವರೊಂದಿಗೆ ಕೂಗಾಡುತ್ತಿದ್ದು, ಆ ಸಮಯದಲ್ಲಿ ಚಾಸಾ1 ರವರು ಆರೋಪಿಯಾದ ನಿಮಗೆ ಹೆಂಗಸರೊಂದಿಗೆ ಗಲಾಟೆ ಮಾಡಿಕೊಳ್ಳಬೇಡ, ಮನೆಗೆ ಹೋಗು ಎಂದು ಸಮಾಧಾನ ಮಾಡುವಾಗ, ಆರೋಪಿಯಾದ ನೀವು ಚಾಸಾ1 ರವರಿಗೆ ಏಕಾಏಕೀಯಾಗಿ ಸೂಳೇಮಗನೇ, ನೀನು ಯಾವನೋ ಹೇಳುವುದಕ್ಕೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಉದ್ದೇಶಪೂರ್ವಕವಾಗಿ ಶಾಂತಿಭಂಗವನ್ನುಂಟು ಮಾಡಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ **352** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**2.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಮುಂದುವರೆದು, ಚಾಸಾ1 ರವರು ಆರೋಪಿಯಾದ ನಿಮ್ಮ ಕೈ ಹಿಡಿದು ಕಳುಹಿಸುತ್ತಿರುವಾಗ ನೀವು ಎಡವಿ ಬಿದ್ದಿದ್ದು, ಬಿದ್ದ ನಿಮ್ಮನ್ನು ಮೇಲಕ್ಕೆ ಎತ್ತಲು ಚಾಸಾ1 ರವರ ಹೋದಾಗ ಪುನಃ ಅವರಿಗೆ ಸೂಳೇಮಗನೆ ನಿನ್ನನ್ನು ಇಷ್ಟಕ್ಕೆ ಸುಮ್ಮನೆ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ **351(2)** ರಡಿಯಲ್ಲಿ

ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**3.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಮುಂದುವರೆದು, ಚಾಸಾ1 ರವರ ಬಲಗೈನ ಮಧ್ಯದ ಬೆರಳನ್ನು ಬಾಯಿಂದ ಕಚ್ಚುತ್ತಿರುವಾಗ, ತಕ್ಷಣ ಅಲ್ಲೇ ಇದ್ದ ಅಂಗಡಿ ಮಾಲೀಕರಾದ ಚಾಸಾ3, ಚಾಸಾ4-ವೆಂಕಟೇಶ್, ಚಾಸಾ2 ಮತ್ತು ಚಾಸಾ5-ಪ್ರವೀಣ್ ಕುಮಾರ್ ರವರುಗಳು ಬಿಡಿಸುವ ಸಮಯದ್ಲಿ ಚಾಸಾ1 ರವರ ಬೆರಳು ತುಂಡಾಗಿ ಅವರಿಗೆ ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ **117(2)** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

ಸದರಿ ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿದ್ದರಿಂದ*,* ಅವುಗಳು ಈ ನ್ಯಾಯಾಲಯದಿಂದ ವಿಚಾರಣೆಯಾಗತಕ್ಕದೆಂದು ಆದೇಶಿಸಲಾಗಿದೆ*.*

ಪ್ರಃ 1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದ್ದೀರಾ***?*** ಅವುಗಳು ನಿಮಗೆ ಅರ್ಥವಾಯಿತೇ***?***

ಆರೋಪಿಯ ಉತ್ತರಃ

ಪ್ರಃ 2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ***?***

ಆರೋಪಿಯ ಉತ್ತರಃ

***(***ಆರೋಪಿಗೆ ದಿನಾಂಕ 03.02.2025 ರಂದು ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ*,* ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು*.* ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ***)***

**Sd/-**

ಮೂಡಿಗೆರೆ
ದಿನಾಂಕಃ 03.02.2025

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ.